**ಸಾಕ್ಷಿಗೆ ದಿನಾಂಕ 30-01-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ಎಸ್ ಬಿ ವಕೀಲರು ಶ್ರೀ ಎಸ್ ಕೆ ಆರ್ ವಕೀಲರ ಪರವಾಗಿಃ**

1. ನಾನು ಅರ್ಜಿದಾರರಿಗೆ ಮೂಲತಃ ಚಿಕಿತ್ಸೆಯನ್ನು ನೀಡಿದ ವೈದ್ಯನಾಗಿರುವುದಿಲ್ಲ. ಅರ್ಜಿದಾರರಿಗೆ ಮೂಳೆಮುರಿತ ಉಂಟಾಗಿ 1 ವರ್ಷದ ನಂತರ ದೈಹಿಕ ಅಂಗನ್ಯೂತನೆಯನ್ನು ನಿರ್ಧರಿಸುವ ಸಲುವಾಗಿ ಒಂದು ಬಾರಿ ಪರೀಕ್ಷೆ ಮಾಡಿರುತ್ತೇನೆ ಎಂದರೆ ಸರಿ. ಅರ್ಜಿದಾರರಿಗೆ ಉಂಟಾದ ಮೂಳೆ ಮುರಿತ ಕೂಡಿಕೊಂಡಿದೆ. ಕ್ಷ-ಕಿರಣದ ಜೊತೆ ಅದರ ವರದಿ ಲಗತ್ತಿಸಿರುವುದಿಲ್ಲ ಎಂದರೆ ಸರಿ. ಅರ್ಜಿದಾರರ ವೃತ್ತಿಪರ ನ್ಯೂನತೆಯನ್ನು ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ಪ್ರಮಾಣಪತ್ರದ 5 ನೇ ಕಂಡಿಕೆಯಲ್ಲಿ ಹೇಳಿರುವ ತೊಂದರೆಗಳು ಕ್ರಮೇಣ ಕಡಿಮೆಯಾಗುತ್ತದೆ ಎಂದರೆ ಸರಿಯಲ್ಲ.

2. ಅರ್ಜಿದಾರರಿಗೆ ಯಾವುದೇ ಶಸ್ತ್ರಚಿಕಿತ್ಸೆ ಆಗಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದ ಕಾರಣ ಶಸ್ತ್ರಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಬಿಡುಗಡೆ ಹೊಂದುವಾಗ ದೈಹಿಕ ಸ್ಥಿತಿ ಸಾಮಾನ್ಯವಾಗಿತ್ತು ಎಂದರೆ ಸರಿ. ಅರ್ಜಿದಾರರು ತಮ್ಮ ವೃತ್ತಿಯನ್ನು ಮುಂದುವರೆಸಬಹುದು ಎಂದರೆ ಸರಿ. ಅರ್ಜಿದಾರರು ಓಡಾಡಲು ತೊಂದರೆ ಇಲ್ಲ ಎಂದರೆ ಸರಿ. ಅರ್ಜಿದಾರರು ದಿನನಿತ್ಯದ ಕೆಲಸಗಳನ್ನು ಕಷ್ಟದಿಂದ ಮಾಡಿಕೊಳ್ಳಬಹುದು. ಅರ್ಜಿದಾರರಿಗೆ ಮೂಳೆಮುರಿತ ಕೂಡಿಕೊಂಡಿರುವ ಕಾರಣ ಯಾವುದೇ ಅಂಗನ್ಯೂನತೆ ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಂಪೂರ್ಣ ದೇಹಕ್ಕೆ ಶೇ.20 ರಷ್ಟು ಅಂಗನ್ಯೂನತೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯ ವಿರುದ್ಧವಾಗಿ ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚು ಅಂಗನ್ಯೂನ್ಯತಾ ಶೇಕಡವನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**